# ಮಾಜಿ ನೀರಾವರಿ ಸಚಿವ ಓಂಪ್ರಕಾಶ ಕಣಗಲಿ ನಿಧನ

ಬೆಳಗಾವಿ: ಮಾಜಿ ನೀರಾವರಿ ಸಚಿವ, ವಕೀಲ ಓಂಪ್ರಕಾಶ ಕಣಗಲಿ (67) ಅವರು ಅನಾರೋಗ್ಯದಿಂದ ನಗರದ ಖಾಸಗಿ ಆಸ್ಪತ್ರೆಯೊಂದರಲ್ಲಿ ಮಂಗಳವಾರ ನಿಧನರಾದರು.



ವಿಧಾನ ಪರಿಷತ್ ಸದಸ್ಯರಾಗಿದ್ದ ಅವರು, ವೀರಪ್ಪ ಮೊಯ್ಲಿ ಅವರ ಸಚಿವ ಸಂಪುಟದಲ್ಲಿ ಬೃಹತ್ ನೀರಾವರಿ ಇಲಾಖೆ ಸಚಿವರಾಗಿ ಸೇವೆ ಸಲ್ಲಿಸಿದ್ದರು. ಕೇಂದ್ರದ ಮಾಜಿ ಸಚಿವ ದಿ. ಬಿ. ಶಂಕರಾನಂದ ಅವರ ಹಿರಿಯ ಪುತ್ರರಾದ ಓಂಪ್ರಕಾಶ ಅವರು ಹುಕ್ಕೇರಿ ತಾಲೂಕಿನ ಕೋಟಬಾಗಿ ಏತ ನೀರಾವರಿ ಯೋಜನೆ ಸೇರಿದಂತೆ ಹಲವಾರು ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದರು. ಹುಕ್ಕೇರಿ ತಾಲೂಕಿನ ಕಣಗಲಿಯಲ್ಲಿ ಬುಧವಾರ ಅಂತ್ಯಕ್ರಿಯೆ ನೆರವೇರಿತು.